Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



Rtn. Francesco Arezzo
RI President



Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant




40h year of Service and Fellowship

Volume 40 Issue - 27 8th January 2026

## ಹಾಸ್ಯ ಸಂಜೆ

ಸದಸ್ಯರುಗಳಿಂದ ಹಾಸ್ಯ ಚಟಾಕಿಯ
ವಿನೋದ ವಿನಿಮಯ

Time : 7.00 p.m.
Venue : Hotel Shivaprasad Grand, Kundapura



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

# ಸಂಪಾದಕೀಯ :



ನನ್ನ ರೋಟರಿ ಬಂಧುಗಳೇ,

ಇಂದು ನನ್ನ ಮನಸ್ಸಿಗೆ ಶ್ರೀ ಆದಿಶಂಕರರ ಸಂದೇಶಗಳು ನೆನಪಿಗೆ ಬರುತ್ತಿತ್ತು. ಅದು ಎಷ್ಟು ಇಂದಿನ ಪ್ರಸಕ್ತ ಕಾಲಕ್ಕೆ ಸಮಂಜಸವಾಗಿದೆ ಎಂಬುದನ್ನು ತಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ. ಶ್ರೀ ಶಂಕರಾಚಾರ್ಯರ ಸಾಧನೆಗೆ ಮೆಚ್ಚಿ, ಶಿವನು ಅವರಿಗೆ ದರುಶನವನ್ನು ನೀಡುತ್ತಾನೆ. ಅದಂತೂ ರೋಚಕ. ಶ್ರೀ ಶಂಕರರು ತಮ್ಮ ಶಿಷ್ಯರೊಂದಿಗೆ ಗಂಗೆಯಲ್ಲಿ ಮಿಂದು ಸಂಚಾರಕ್ಕೆ ಹೊರಟಾಗ ಎದುರು ಸ್ಮಶಾನ ಕಾಯುವ ವ್ಯಕ್ತಿ ತನ್ನ ಕುರಿ ಹಾಗೂ ನಾಯಿಗಳೊಂದಿಗೆ ಇವರಿಗೆ ಅಡ್ಡ ಬರುತ್ತಾನೆ. ಇವರ ಶಿಷ್ಯರು ಅವನನ್ನು ತಮ್ಮ ದಾರಿಯಿಂದ ಪಕ್ಕಕ್ಕೆ ಸರಿಯಲು ದಾರಿ ಬಿಡು ಎಂದು ಹೇಳಿದಾಗ, ಆ ವ್ಯಕ್ತಿ " ಯಾವುದನ್ನು ಬಿಡುವುದು ಈ ಮಣ್ಣಿನ ದೇಹವನ್ನೇ ಅಥವಾ ಸರ್ವಾಂತರ್ಯಾಮಿಯಾದ ಆತ್ಮವನ್ನೇ" ಎಂದು ಕೇಳಿದಾಗ, ಶ್ರೀ ಶಂಕರರಿಗೆ ಎದುರು ಇರುವಾತ ಸಾಕ್ಷಾತ್ ಶ್ರೀ ಪರಮೇಶ್ವರ ಎಂದು ಅರಿವಾಗುತ್ತದೆ . ಈ ಸನ್ನಿವೇಶದಿಂದ ಜಗತ್ತಿಗೇ ಒಂದು ಸಂದೇಶವನ್ನು ಕೊಟ್ಟರು. "ಅಹಂ ಬ್ರಹ್ಮಾಸ್ಮಿ" "ನಿಜವಾದ ಸುಖ ಬರಿಯ ಬಾಹ್ಯಾಚರಣೆಗಳಲ್ಲಿ ಇಲ್ಲ. ಎಲ್ಲಾ ಜೀವಿಗಳಲ್ಲಿರುವ ನಿಜ ಆತ್ಮವನ್ನು ಗುರುತಿಸಿದಾಗ ಮಾತ್ರ" "ನಿನ್ನ ಒಳ್ಳೆಯತನದಿಂದ, ಒಳ್ಳೆಯ ಕೆಲಸಗಳಿಂದ ಮತ್ತೋರ್ವರಿಗೂ ದೇವರಾಗು". "ನಮ್ಮ ದೇಹದ ಒಳಗಿರುವ ಆತ್ಮ ಅದರ ಒಡೆಯ, ದೇಹ ಅದರ ಕವಚ; ಅದರ ಅಡಿಯಾಳು. ಜನರು ಅವೆರಡೂ ಒಂದೇ ಎಂದು ಭ್ರಮಿಸುತ್ತಾರೆ. ಇದಕ್ಕಿಂತ ದೊಡ್ಡ ಅಜ್ಞಾನವಿದೆಯೇ?". ಒಮ್ಮೆ ಒಂದು ಗುರುಕುಲವನ್ನು ಪ್ರವೇಶಿಸಿದಾಗ ಒಬ್ಬ ಶಿಕ್ಷಕ ತನ್ನ ಶಿಷ್ಯರುಗಳಿಗೆ ಶ್ಲೋಕವೊಂದನ್ನು ಉರು ಹೊಡೆಯಿರಿ ಎಂದು ಪದೇ ಪದೇ ಹೇಳಿಕೊಡುತ್ತಿದ್ದ. ಆ ಸಮಯದಲ್ಲಿ ಶ್ರೀ ಶಂಕರರು ಅಲ್ಲೇ ತಡೆದು "ಪುಸ್ತಕ ಪಾಠದಿಂದ ಜಾಗೃತಿ ಹುಟ್ಟಲಾರದು, ಗೋವಿಂದನನ್ನು ಆರಾಧಿಸಿ, ನಿಮ್ಮ ಆತ್ಮ ಜಡವಾಗದಿರಲಿ ಗೋವಿಂದನನ್ನು ಭಜಿಸಿರಿ" ಜಗತ್ತಿಗೆ ಅಂದೆ ಒಂದು ಅತ್ಯಮೂಲ್ಯ ಸಂದೇಶವನ್ನು ನೀಡಿದರು. ಅದೇ "ಭಜ ಗೋವಿಂದಮ್ ಭಜ ಗೋವಿಂದಂ ಗೋವಿಂದಮ್ ಭಜ ಮೂಢಮತೆ, ಸಂಪ್ರಾಪ್ತೆ ಸನ್ನಿಹತೇ ಕಾಲೆ ನಹಿ ನಹಿ ರಕ್ಷತಿ ಡುಕ್ರುಂಕರಣೆ" ಅಂದರೆ ಅಪಾಯ ಎದುರಾದಾಗ ಅದರಿಂದ ತಪ್ಪಿಸಿಕೊಳ್ಳಲು ದೇವರಲ್ಲಿ ಹೃತ್ಪೂರ್ವಕವಾಗಿ ಪ್ರಾರ್ಥಿಸಿ, ಪಾರಾಗುವ ಉಪಾಯವನ್ನು ಹುಡುಕಿಕೊಳ್ಳಬೇಕೇ ವಿನಹ ಕಲಿತ ದೇವರ ಶ್ಲೋಕವನ್ನು ಉರು ಹೊಡೆಯುತ್ತಾ ಕೂತರೆ ಬಂದಂತಹ ಅಪಾಯದಲ್ಲಿ ಸಿಲುಕಿ ನೀನು ನಾಶವಾಗುತ್ತಿ" ಈ ವೇದಾಂತ ಜಗತ್ಪ್ರಸಿದ್ಧವಾಯಿತು. ನಾವು ರೋಟರಿ ಸದಸ್ಯರಾದ ಮೇಲೆ ಒಂದು ರೀತಿಯಲ್ಲಿ ಅಹಂ ಬ್ರಹ್ಮಾಸ್ಮಿ ಎಂಬ ಧ್ಯೇಯವನ್ನು ಅಳವಡಿಸಿಕೊಂಡಿರುತ್ತೇವೆ ಅಲ್ಲವೇ?. **– ರೊ. ರಮಾನಂದ ಕಾರಂತ**

## ವಾರದ ಸಭೆಯ ವರದಿ




ತಾ। 01/01/2026 ರಂದು ನಡೆದ ನಮ್ಮ ವಾರದ ಸಭೆಗೆ ರೊ. ಸುಪ್ರೀತ್ ಚಾತ್ರ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಸಾರಿಗೆ ಸೇವೆಯಲ್ಲಿನ ಕ್ಷೇತ್ರದಲ್ಲಿ ಎದುರಾಗುವ ಸವಾಲುಗಳು ಹಾಗೂ ಪರಿಹಾರೋಪಾಯಗಳು ಎಂಬ ವಿಚಾರದಲ್ಲಿ ಸುವಿಸ್ತಾರವಾಗಿ ಮಾತನಾಡುತ್ತಾ ಇಂದಿನ ವಿದ್ಯಮಾನದಲ್ಲಿ ಖಾಸಾಗಿ ಸಾರಿಗೆ ವ್ಯವಸ್ತೆ ಹಳ್ಳಿ ಹಳ್ಳಿಗೂ ವೃದ್ಧಿಸಿ ಸಹಸ್ರಾರು ಗ್ರಾಮ ವಾಸಿಗಳು ಬಡವರು ನಗರ ಪ್ರದೇಶಕ್ಕೆ ಆಗಮಿಸಿ ವಿದ್ಯಾಭ್ಯಾಸ ಆಸ್ಪತ್ರೆ, ಉದ್ಯೋಗ ಮುಂತಾದ ಸೌಲಭ್ಯ ಸಿಗುವಂತಾಗಿದೆ. ತಮ್ಮ ವ್ಯವಹಾರದಲ್ಲಿ ಸರಕಾರಿ ಸಾರಿಗೆ ವ್ಯವಸ್ತೆ ಮಧ್ಯೆ ಪ್ರವೇಶಿಸಿ ನೀಡುವ ಸ್ಪರ್ದೆ ಹಾಗೂ ಸರಕಾರಿ ವ್ಯವಸ್ತೆಗೆ ಅನ್ವಯಿಸದ ರೀತಿ ನಿಯಮಗಳನ್ನು ಖಾಸಾಗಿಯವರು ಪಾಲಿಸಲೇ ಬೇಕಾದ ಅನಿವಾರ್ಯತೆ ಹಾಗೂ ಕಷ್ಟಗಳನ್ನು ಹಂಚಿಕೊಂಡರು ಕಡೆಯದಾಗಿ ಹಳ್ಳಿಯೊಂದು ಉದ್ದಾರವಾದರೆ ಒಂದು ನಗರ ಉದ್ದಾರವಾಗುತ್ತದೆ ಹಾಗೂ ಒಂದು ನಗರ ಉದ್ದಾರವಾದರೆ ರಾಜ್ಯ ಉದ್ದಾರ ಆಗುತ್ತದೆ ಹಾಗೂ ರಾಜ್ಯ ಉದ್ದಾರ ಆದರೆ ಒಂದು ದೇಶವೇ ಪ್ರಗತಿಯನ್ನು ಸಾಧಿಸುತ್ತದೆ ಎಂಬ ವಾಜಪೇಯಿ ಅವರ ಸಂದೇಶವನ್ನು ತಿಳಿಸಿದರು. ಆಗಮಿಸಿದ ಸರ್ವರನ್ನೂ ಅಧ್ಯಕ್ಷ ರೊ. ಸಚಿನ್ ನಕ್ಕತ್ತಾಯ ಸ್ವಾಗತಿಸಿದರು. ರೊ. ಶ್ರೀನಿವಾಸ ಶೇಟ್ ಪ್ರಾರ್ಥನೆ ನೆರವೇರಿಸಿದರು. ರೊ. ರಮಾನಂದ ಕಾರಂತ್ ಅತಿಥಿಗಳ ಪರಿಚಯ ನಿರ್ವಹಿಇದರು. ರೊ. ಪ್ರಕಾಶ್ ಶೆಟ್ಟಿ ವಾರದ ಕೊನೆಯ ಹಾಸ್ಯವನ್ನು ನಡೆಸಿದರು. ರೊ. ರಾಘವೇಂದ್ರ ಶೇಟ್ ಧನ್ಯವಾದ ಅರ್ಪಿಸಿದರು..

## ವಿಶೇಷ ಚೇತನ ವಿದ್ಯಾರ್ಥಿಗಳಲ್ಲಿ ವಿಶೇಷ ಶಕ್ತಿ ಅಡಗಿದೆ: ರೊ. ಸಚಿನ್ ನಕ್ಕತ್ತಾಯ



ವಲಯದ ವಿಶೇಷ ಚೇತನ ವಿದ್ಯಾರ್ಥಿಗಳ ವೈದ್ಯಕೀಯ ಮೌಲ್ಯಾಂಕನ ಶಿಬಿರವನ್ನು ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಲಾಮಂದಿರದಲ್ಲಿ ಉದ್ಘಾಟಿಸಿ, “ವಿಶೇಷ ಚೇತನ ವಿದ್ಯಾರ್ಥಿಗಳಲ್ಲಿ ವಿಶೇಷ ಶಕ್ತಿ ಇದೆ. ಇವರಿಗೆ ಎಲ್ಲರ ಪ್ರೋತ್ಸಾಹ ಅಗತ್ಯವಿದೆ? ಎಂದು ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಇದರ ಅಧ್ಯಕ್ಷರಾದ ರೊ. ಸಚಿನ್ ನಕತ್ತಾಯ ನುಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಎಚ್. ಶೋಭಾ ಶೆಟ್ಟಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಹಾಯಕ ಯೋಜನಾ ಸಮನ್ವಯಾಧಿಕಾರಿಗಳಾದ ಶ್ರೀಮತಿ ಜ್ಯೋತಿ. ಬಿ., ಅಕ್ಷರ ದಾಸೋಹ ಸಹಾಯಕ ನಿರ್ದೇಶಕರಾದ ಚಂದ್ರ ನಾಯ್ಕ್, ಎಲುಬು ತಜ್ಞ ಡಾ। ಅರವಿಂದ್, ನೇತ್ರ ತಜ್ಞೆ ಡಾ। ವಿಜಯಲಕ್ಷ್ಮಿ, ರೋಟರಿ ಕಾರ್ಯದರ್ಶಿ ಜೆರಾಲ್ಡ್ ಕ್ರಾಸ್ತಾ. ಕ್ಷೇತ್ರ ಸಮನ್ವಯಾಧಿಕಾರಿ ಅಶೋಕ್ ನಾಯಕ್, ಡಿಡಿಆರ್‌ಸಿ ನೋಡಲ್ ಶ್ರೀಮತಿ ಜಯಶ್ರೀ, ಉಪಪ್ರಾಂಶುಪಾಲರಾದ ಕಿರಣ್ ಹೆಗ್ಡೆ, ಶ್ರೀಮತಿ ಗಂಗೆ ಶಾನುಭಾಗ್‌ಉಪಸ್ಥಿತರಿದ್ದರು. ಕೋಣಿ ಸಿಆರ್‌ಪಿ ಶ್ರೀಮತಿ ಸುಮನ ಪ್ರಾರ್ಥನೆಗೈದು, ಪ್ರದೀಪ್ ಕುಮಾರ್ ಸ್ವಾಗತಿಸಿದರು. ಬಿಆರ್‌ಪಿ ಸಂತೋಷ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿ, ಆಂಕರ್ ಕುಲಾಲ್ ವಂದಿಸಿದರು.

---

ನಮ್ಮ ಕ್ಲಬ್ಬಿನ ನಿಕಟ ಪೂರ್ವ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾ ಹಾಗೂ ಅವರ ಪತಿ ಶ್ರೀ ಕೋಲೀನ್ ಮೆಂಡೋನ್ಸಾ ದಂಪತಿಗಳು ತಮ್ಮ ಸುಪುತ್ರ ಶ್ರೀ ಸಿಯೋನ್ ಮೆಂಡೋನ್ಸಾ ಅವರ ವಿವಾಹವನ್ನು ಅಕೇಶಿಯಾ ಮೆಂಡೋನ್ಸಾ ಅವರೊಂದಿಗೆ ತಾ.25 ಜನವರಿ ಆದಿತ್ಯವಾರದಂದು ತಲ್ಲೂರಿನ ***St.Francis Assessi Church*** ನಲ್ಲಿ ಆಯೋಜಿಸಿರುತ್ತಾರೆ ಹಾಗೂ ನಮ್ಮ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಆಹ್ವಾನಿಸುತ್ತಾರೆ.

ನೀರು ಬೆಂಕಿಯಿಂದ ಬಿಸಿಯಾಗುತ್ತದೆ.
ಆದರೂ ಕೂಡ ನೀರು ಬೆಂಕಿಯನ್ನು ಆರಿಸೋ
ಗುಣವನ್ನು ಬಿಟ್ಟುಕೊಡುವುದಿಲ್ಲ.
ಹಾಗೆಯೇ ನಾವು ಎಂಥವರ ಜೊತೆ
ಸೇರಿದರೂ ಕೂಡ ನಮ್ಮತನವನ್ನು
ಬಿಟ್ಟು ಕೊಡಬಾರದು.....


CERTIFICATE
of Appreciation

Rotary
District 3132

Dr Umesh
Puthran

We are very pleased and deeply honored to present this certificate to you in recognition of your enthusiastic and active participation and successful completion of

RID 3132 Quiz 2.0.22 (Vocational Service)

Your dedication to learning Rotary's principles, values, and rich legacy is truly appreciated. Thank you for embracing and promoting the Rotary spirit.

Rtn. Sudhir Lature
District Governor, RID 3132 | RY 25-26

Rtn. Avinash Mathapati
Dist. Chair, Rotary Information | RY 25-26

Achieved Percentage: 100%

Certificate Awarderd On: 2-1-2026

RID 3132 QUIZ 2.0

---

### ಮನೋ ಕವಚ :–

ಮನಃಶಕ್ತಿಯು ಜೈವಿಕ ಶಕ್ತಿಗೆ ಹೋಲಿಸಿದರೆ ಬಹು ಅಗಾಧವೂ, ಪ್ರಮುಖವೂ ಆಗಿದೆ. ಉದಾಹರಣೆಗೆ, ನಮ್ಮ ನರ ಮಂಡಲವನ್ನು ತೆಗೆದುಕೊಳ್ಳೋಣ. ನರ ಮಂಡಲವು ಜೀವಂತವಾಗಿರಲು ಜೈವಿಕ ಶಕ್ತಿಯೇ ಕಾರಣ. ಹಾಗೆಯೇ ನರಗಳಿಂದ ಸ್ನಾಯುಗಳು (ಮಾಂಸ ಖಂಡ) ಶಕ್ತಿಯುತವಾಗುತ್ತವೆ. ನರವು ತುಂಡಾದಾಗ ಸ್ನಾಯುವು ಜೀವಶಕ್ತಿಯ ಅಭಾವದಿಂದ ಸಾಯುತ್ತದೆ. ಆದರೆ ಮನಃಶಕ್ತಿಯ ಅಭಾವ ವುಂಟಾದಾಗ, ನರ ಮತ್ತು ಸ್ನಾಯುಗಳಿಗೆ ಯಾವ ಹಾನಿಯಾಗದಿದ್ದರೂ ಮನುಷ್ಯನು ಶಕ್ತಿಗುಂದಿ ನಿಶ್ಯಕ್ತ ನಾಗುತ್ತಾನೆ. ಇದು ಏಕೆಂದರೆ ಜೀವ ಶಕ್ತಿಗೆ ಮನಃಶಕ್ತಿ ಯೇ ಆಧಾರವಾಗಿದೆ. ಮನಃಶಕ್ತಿಯು ಯಾವಾಗ ಗೊಂದಲಮಯವಾಗುವುದೋ ಆಗ, ನಮ್ಮಲ್ಲಿ ಬಲವಾದ ಶರೀರವೂ, ಆರೋಗ್ಯವಾದ ನರಮಂಡಲ ವು ಇದ್ದರೂ ಸಹ ನಾವು ಅಸಹಾಯಕರೂ, ಅಶಕ್ತರೂ ಆಗುವುದು ಖಚಿತ! ಮಾನಸಿಕ ವೈಫಲ್ಯವಾದಾಗ ನಮ್ಮೆಲ್ಲಾ ಶಕ್ತಿಯೂ ಕುಸಿತಗೊಳ್ಳುತ್ತದೆ. ಈ ಪರಿಸ್ಥಿತಿ ಯನ್ನು ನಾವು ನಿತ್ಯವೂ ನಮ್ಮ ಕೆಲಸದ ಜೀವನದಲ್ಲಿ ಆಗಾಗ ನೋಡುತ್ತಿರುತ್ತೇವೆ. ಹೊರಗಿನಿಂದ ನೋಡಲು ಆರೋಗ್ಯಯುತ ಹಾಗೂ ಶಕ್ತಿಯುತವಾಗಿ ಕಾಣುವ ಜನರು ಮಾನಸಿಕ ವೈಫಲ್ಯಕ್ಕೊಳಗಾದಾಗ ಅಶಕ್ತರಾಗಿ ಕುಸಿದುಹೋಗುತ್ತಾರೆ. ಇದೇ ಮನೋಕವಚದ ಪ್ರಾಮುಖ್ಯತೆ. ಇದೇ ಇತರ ಕವಚಗಳ ಆತ್ಮವು. **– ಸ್ವಾಮಿ ರಂಗನಾಥಾನಂದ**



Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95



Rtn. K. T. Surendranath 1995-96

Rtn. B. C. Somayaji 1997-98

Rtn. S. Subraya Halambi 1999-2000

Rtn. K. Seetharama Nackathaya 2001-02

Rtn. Dr. Umesh Puthran 2003-04

Rtn. A. Shantharam Pai 2005-06

## Thought for the week...

ಹಕ್ಕಿಯ ಗೂಡಿಗೆ ಕಲ್ಲು ಹೊಡಿಯಬಹುದು ಆದರೆ ಆ ಹಕ್ಕಿಯು ಗೂಡು ಕಟ್ಟುವ ಕಲೆಗೆ ಅಲ್ಲ. ಒಬ್ಬ ವ್ಯಕ್ತಿಗೆ ಅವಮಾನ ಮಾಡಬಹುದು ಆದರೆ ಅವನಲ್ಲಿರುವ ಒಳ್ಳೆಯತನವನ್ನು ನಾಶಪಡಿಸಲು ಸಾಧ್ಯವಿಲ್ಲ. ಆದರೆ ಅವುಗಳಿಗೆ ನೀವು ಮಾಡಿದ ಅಪಚಾರ ಮಾತ್ರ ನಿಮ್ಮನ್ನೇ ಇಲ್ಲವಾಗಿಸಬಹುದು.

ಮನುಷ್ಯನಿಗೆ ಆರೋಗ್ಯವೇ ಶ್ರೇಷ್ಠ ಉಡುಗೊರೆ;
ಸಂತೃಪ್ತಿಯೇ ಶ್ರೇಷ್ಠ ಸಂಪತ್ತು;
ವಿಶ್ವಾಸಾರ್ಹತೆಯೇ ಶ್ರೇಷ್ಠ ಸಂಬಂಧ
– ಗೌತಮ ಬುದ್ಧ






Birthday Celebration of Rtn. Arun Kumar Shetty

## THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

*This Bulletin is sponsored by :*

**Rtn. Dr. Rajesh Bayari**
**Mob. : 9480011578**

For Private Circulation only

Email id – rotaryclub.kundapurasouth@gmail.com



Rtn. S. Sadananda Chatra 1996-97

Rtn. K. Suresh Kamath 1998-99

Rtn. S. Vijaya Shetty 2000-01

Rtn. U. S. Shenoy 2002-03

Rtn. Dr. B. V. Udupa 2004-05

Rtn. K. Shantharam Prabhu 2006-07



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouzline F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24 | Rtn. Judith Mendonca 2024-25